
# ಪಲಾಯನ



ಅವನ ಮನಸ್ಸು ವಿಚಲಿತವಾಗಿತ್ತು. ಕೋಲ್ಕತ್ತಾದಲ್ಲಿ ಬಿಸಿಲು ಯಾವ ಪ್ರಮಾಣದಲ್ಲಿ ಪ್ರಚಂಡವಾಗುತ್ತಿತ್ತೋ, ಅದೇ ಪ್ರಮಾಣದಲ್ಲಿ ಅವನ ವಿಫಲತೆ ಹೆಚ್ಚುತ್ತಿತ್ತು. ತಾನು ಸಾಯುವ ಸಮಯ ದೂರವಿಲ್ಲ, ತಾನು ತನ್ನ ಈ ದುರದೃಷ್ಟ ಶರೀರವನ್ನು ತ್ಯಜಿಸಬೇಕಾಗುತ್ತದೆ ಎಂಬ ಅನುಭವ ಗಾಢವಾಗುತ್ತಿತ್ತು.

ಈ ಮಹಾನಗರದಲ್ಲಿ ಒಂದು ಅವ್ಯವಸ್ಥಿತ–ಕುವ್ಯವಸ್ಥಿತ ಜನರ ಪ್ರವಾಹ ಅವನನ್ನು ಕಡಿಯಲು ಬರುತ್ತಿತ್ತು. ಒಂದು ವಿಚಿತ್ರ ಪಲಾಯನ, ಓಡುವ ನೆರಳುಗಳು... ಪ್ರತಿಯೊಬ್ಬನೂ ಇನ್ನೊಬ್ಬನಿಗಿಂತ ಮುಂದೆ ಹೋಗುವ ಕಾತರ? ಯಾರಿಗೂ, ಯಾರ ನಿರೀಕ್ಷೆಯಿಲ್ಲ. ಈ ಕೋಲಾಹಲಗಳು ಅವನ ಕಿವಿಯ ಪರದೆಯನ್ನು ಭೇದಿಸುತ್ತಿದ್ದವು. ಅವನು ಆ ವಾತಾವರಣದಲ್ಲಿ ಒಂದು ವಿಚಿತ್ರ ಪರಕೀಯತೆಯನ್ನು ಮನಗಾಣುತ್ತಿದ್ದ. ಮಹಾನಗರದ ವಿಚಿತ್ರ, ವೈವಿಧ್ಯಮಯ, ವಿವಿಧ ಬಣ್ಣಗಳು ಅಥವಾ ಸಾಂಸ್ಕೃತಿಕ ಚಟುವಟಿಕೆಗಳು ಅವನನ್ನು ಲೇಶಮಾತ್ರವೂ ಆಕರ್ಷಿಸುತ್ತಿರಲಿಲ್ಲ. ತನ್ನ ಕಾಶ್ಮೀರಕ್ಕೆ ಮರಳಿ ಹಾರಿ ಹೋಗಲು ಮನಸ್ಸಾಗುತ್ತಿತ್ತು! ಆದರೆ, ಇದು ಸಾಧ್ಯವಿರಲಿಲ್ಲ. ಅವನಿಡೀ ಅಸ್ತಿತ್ವ ಎಲ್ಲೋ ಕಳೆದು ಹೋದಂತಾಗಿತ್ತು. ಕಳೆದ ಐವತ್ತು ವರ್ಷಗಳವರೆಗೆ ಅವನ ಜೀವನ ಕಾಶ್ಮೀರದಲ್ಲಿ ಚಟುವಟಿಕೆಯಿಂದಿತ್ತು, ಅದು ಇಲ್ಲಿಗೆ ಬಂದು ಜಡವಾಗಿತ್ತು. ಅಷ್ಟು ವರ್ಷ ಕಾಶ್ಮೀರದಲ್ಲಿ ಸಹ ಜೀವನ ಒಂದೇ ವಿಧದಲ್ಲಿ ಅಥವಾ ರೀತಿಯಲ್ಲಿ ಕಳೆದಿರಲಿಲ್ಲ. ಮೊದಲು 'ಡೋಗರಾ–ಶಾಹಿ'(ಜಮ್ಮೂ, ಕಾಶ್ಮೀರ, ಕಾಂಗಡಾ ಮುಂತಾದ ಪ್ರದೇಶಗಳಲ್ಲಿ ನೆಲೆಸಿದ ಒಂದು ಜನಾಂಗ)ಯ ಆಳ್ವಿಕೆಯಿತ್ತು.